2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 34/2024

| | | |
|---|---|---|
| ಸಾಕ್ಷಿದಾರರ ಹೆಸರು | - ನಾಗಮ್ಮ | ಪಿಡಬ್ಲೂ - 03 |
| ಗಂಡನ ಹೆಸರು | - ಸೋಮಶೇಖರ | ಸಿಡಬ್ಲೂ - 05 |
| ವಯಸ್ಸು | - 47 ವರ್ಷ | |
| ಉದ್ಯೋಗ | - ಕೂಲಿ | |
| ವಾಸ ಸ್ಥಳ | - ಕೂವೆ ಗ್ರಾಮ, ಮೂಡಿಗೆರೆ | |

ದಿನಾಂಕಃ **09.01.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ಆರೋಪಿತರು ಗೊತ್ತು. ಅವರು ಟಾಟಾ ಎಸ್ಟೇಟಿನಲ್ಲಿ ನಮ್ಮ ಜೊತೆ ಕೂಲಿ ಕೆಲಸ ಮಾಡಿಕೊಂಡಿದ್ದರು. ಚಾಸಾ.1 ರವರು ನಮ್ಮ ಎಸ್ಟೇಟಿನ ಮ್ಯಾನೆಜರಾಗಿ ಕೆಲಸ ಮಾಡುತ್ತಿದ್ದರು. ಚಾಸಾ.2 ನಮ್ಮ ಎಸ್ಟೇಟಿನಲ್ಲಿ ಸೂಪರ್ ವೈಸರ್ ಹಾಗೂ ಚಾಸಾ.3 ರೈಟರಾಗಿ ಕೆಲಸ ಮಾಡುತ್ತಿದ್ದರು. ಚಾಸಾ.4, 6 ಮತ್ತು 7 ರವರು ನಮ್ಮ ಎಸ್ಟೇಟಿನಲ್ಲಿ ಕೂಲಿ ಕೆಲಸ ಮಾಡುತ್ತಾರೆ. ಚಾಸಾ.8 ನಮ್ಮ ಎಸ್ಟೇಟಿನ ಕಚೇರಿಯಲ್ಲಿ ಕೆಲಸ ಮಾಡುತ್ತಾರೆ.

2. ಮೃತ ಶಿವಕುಮಾರ ಗೊತ್ತು. ಮೃತ ಶಿವಕುಮಾರ 2 ನೇ ಆರೋಪಿಯ ಮಗ. ದಿಃ 15.08.2023 ರಂದು ಶಿವಕುಮಾರ ಮರಣಹೊಂದಿದ್ದಾನೆ. ಅಂದು ನಾನು ಕೂಲಿ ಲೈನಿನಲ್ಲಿ ಕೆಲಸ ಮಾಡುತ್ತಿದ್ದೆ. ನನ್ನ ಜೊತೆ ಇನ್ನು 8 ಜನ ಕೂಲಿ ಲೈನಿನಲ್ಲಿ ಕೆಲಸ ಮಾಡುತ್ತಿದ್ದರು. ನಾನು ಕಳೆದ 16 ವರ್ಷಗಳಿಂದ ಕೂಲಿ ಕೆಲಸ ಮಾಡುತ್ತಿದ್ದೇನೆ. ಆರೋಪಿತರು ಮೂಲತಃ ಜಾರ್ಖಂಡ್ ರಾಜ್ಯದವರು. ನನಗೆ ಕನ್ನಡ ಹೊರತುಪಡಿಸಿದರೆ ಹಿಂದಿ ಮತ್ತು ತುಳು ಭಾಷೆ ಸ್ವಲ್ಪ ಮಟ್ಟಿಗೆ ಅರ್ಥವಾಗುತ್ತದೆ.

3. ಅಂದು ಮದ್ಯಾಹ್ನ 1.30 ಕ್ಕೆ ನಾವು ಊಟ ಮಾಡಿ ಬರುತ್ತಿದ್ದಾಗ 2 ನೇ ಆರೋಪಿ ತನ್ನ ಮಗು ಕಾಣುವುದಿಲ್ಲ ಎಂದು ಹೇಳುತ್ತಿದ್ದಳು. 1 ಮತ್ತು 2 ನೇ ಆರೋಪಿತರು ಸೇರಿ ಮಗುವನ್ನು ಹುಡುಕುತ್ತಿದ್ದರು. ಸ್ವಲ್ಪ ಸಮಯದಲ್ಲಿ ಆರೋಪಿತರು ಬಂಗಲೆಯ ಹತ್ತಿರದಿಂದ ಮಗುವನ್ನು ಕರೆದುಕೊಂಡು ಬಂದರು. ಮಗು ಗಾಬರಿಯಾಗಿದ್ದು ಬಾಯಿಯಲ್ಲಿ ರಕ್ತ ಒಣಗಿತ್ತು. ಬಟ್ಟೆ ಗಲೀಜು ಆಗಿದ್ದು ಮಲ ವಿಸರ್ಜನೆ ಮಾಡಿಕೊಂಡಿತ್ತು. ಮಗುವನ್ನು ಸ್ವಚ್ಚ ಗೊಳಿಸಿ ಬೇರೆ ಬಟ್ಟೆ ಹಾಕಿ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ನಾನು ಸೂಚಿಸಿದೆ.

4. ನಂತರ 1 ನೇ ಆರೋಪಿ ಮಗುವನ್ನು ಹೆಗಲ ಮೇಲೆ ಹಾಕಿಕೊಂಡು ನಡೆದುಕೊಂಡು ಆಸ್ಪತ್ರೆಗೆ ಹೋದರು. ಸ್ವಲ್ಪ ದೂರ ನಡೆದುಕೊಂಡು ಹೋದ ಆರೋಪಿ ಮಗುವಿಗೆ ಪ್ರಜ್ಞೆ ತಪ್ಪಿದೆ ಎಂದು ಜಾರ್ಕಂಡ ನ ಬೇರೆ ಕೂಲಿ ಕೆಲಸದವರಿಗೆ ಪೋನು ಮಾಡಿದ್ದಾನೆ. ಮಗುವನ್ನು ವಾಪಸ್ಸು ಕೂಲಿ ಲೈನಿನ ಬಳಿ ಕರೆದುಕೊಂಡು ಬಂದಿದ್ದಾನೆ. ನಾನು ಆಗ ಕೆಲಸ ಮುಗಿಸಿ ಬರುತ್ತಿದ್ದೆ. ಮಗುವಿನ ಕುತ್ತಿಗೆ ಅಡ್ಡವಾಗಿದ್ದು ನಾನು ಚಾಸಾ.8 ರವರಿಗೆ ಕರೆ ಮಾಡಿ ಮಗುವಿನ ಸ್ಥಿತಿ ವಿವರಿಸಿದೆ.

5. ನಂತರ ಚಾಸಾ.2 ಹಾಗೂ 3 ರವರು ಮಗುವನ್ನು ಒಂದು ಬೈಕಿನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಮಗುವನ್ನು ಮೊದಲು ನಿಡುವಾಳೆ ಪ್ರಾಥಮಿಕ ಕೇಂದ್ರಕ್ಕೆ ಕರೆದುಕೊಂಡು ಹೋದರು ನಂತರ ಅಲ್ಲಿಂದ ಮಗುವನ್ನು ಮೂಡಿಗೆರೆ ಆಸ್ಪತ್ರೆಗೆ ಕರೆದುಕೊಂಡು ಹೋದರು. ಮಗು ಮರಣಹೊಂದಿತ್ತು.

ಮಗುವನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ನಾವು ಕೂಡ ಜೀಪಿನಲ್ಲಿ ಆಸ್ಪತ್ರೆಗೆ ಹೋಗಿದ್ದೆವು.

6. ಮರುದಿನ ಪುನಃ ನಾನು ಮೂಡಿಗೆರೆ ಆಸ್ಪತ್ರೆಗೆ ಹೋದೆ. ಪೋಲೀಸರು ನನಗೆ ಆಸ್ಪತ್ರೆಗೆ ಬರಲು ತಿಳಿಸಿದ್ದರು. ಶವಗಾರದಲ್ಲಿ ಮಗುವಿನ ಶವ ಇತ್ತು. ಮಗುವಿನ ಶವದ ಕುತ್ತಿಗೆಯ ಹತ್ತಿರ ಅಮುಕಿದ ಗುರುತು ಇತ್ತು. ಪೋಲೀಸರು ನನ್ನನ್ನು ವಿಚಾರಿಸಿದಾಗ ನಾನು ಈ ಬಗ್ಗೆ ಹೇಳಿಕೆ ನೀಡಿದ್ದೇನೆ.

7. ಮೂರನೇ ದಿನ ನಾನು ಬಾಳೂರು ಪೋಲೀಸ್ ಠಾಣೆಗೆ ಹೋಗಿದ್ದೆ. ಪೋಲೀಸರು ಆಗ ನನ್ನನ್ನು ವಿಚಾರಿಸಿದರು. ನಾನು ಪೋಲೀಸರಲ್ಲಿ ಈ ಹಿಂದೆ ಹೇಳಿದಂತೆ ನನ್ನ ಹೇಳಿಕೆ ನೀಡಿದ್ದೇನೆ. 2 ನೇ ಆರೋಪಿ ನಮ್ಮ ಕೂಲಿ ಲೈನಿನಲ್ಲಿ ಜಾರ್ಕಂಡ ನಿಂದ ಬಂದ ಕೂಲಿಗಳ ಮಕ್ಕಳನ್ನು ನೋಡಿಕೊಂಡಿದ್ದರು. 1 ನೇ ಆರೋಪಿ ನಮ್ಮ ಜೊತೆ ಕೂಲಿ ಕೆಲಸ ಮಾಡಿಕೊಂಡಿದ್ದ.

8. ಮಗು ಮರಣಹೊಂದಿದ ನಂತರ ನಮಗೆ 1 ನೇ ಆರೋಪಿ ಎರಡನೇ ಆರೋಪಿಯ ಎರಡನೇ ಗಂಡ ಎಂದು ತಿಳಿಯಿತು. ಮೃತ ಮಗು 2 ನೇ ಆರೋಪಿಯ ಮೊದಲ ಗಂಡನಿಂದ ಜನಿಸಿದ್ದು ಎಂದು ಗೊತ್ತಾಯಿತು. ಆರೋಪಿತರು ಮೃತ ಮಗುವನ್ನು ಹೇಗೆ ನೋಡಿಕೊಳ್ಳುತ್ತಿದ್ದರು ಎಂದು ನನಗೆ ಮಾಹಿತಿ ಇಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>

9. ಮಗು ದಿಃ 18.12.2023 ರಂದು ಮರಣಹೊಂದಿದೆ ಎಂದರೆ ನಿಜ. ನಾನು ಪೋಲೀಸ್ ಠಾಣೆಗೆ ಹೋದಾಗ 1 ನೇ ಆರೋಪಿಗೆ ಮೃತ ಮಗು ಎರಡನೇ ಆರೋಪಿಯ ಮೊದಲನೇ ಗಂಡನಿಂದ ಹುಟ್ಟಿದ್ದ ಕಾರಣದಿಂದ ಹೆಚ್ಚಿನ ಪ್ರೀತಿ ಇರಲಿಲ್ಲ ಎಂದು ಮತ್ತು 2 ನೇ ಆರೋಪಿ 1 ನೇ ಆರೋಪಿಯಿಂದ ಪುನಃ ಗರ್ಭಿಣಿಯಾಗಿದ್ದಾಳೆ ಎಂದು ಹೇಳಿಕೆ ನೀಡಿದ್ದೇನೆ ಎಂದರೆ ನಿಜ.

ಪಾಟೀ ಸವಾಲುಃಶ್ರೀ ಎನ್.ಡಿ. (ಡಿ.ಎಲ್.ಎಸ್.ಎ) ವಕೀಲರಿಂದ ಆರೋಪಿ ಪರವಾಗಿಃ

10. ನಮ್ಮ ಎಸ್ಟೇಟಿನಲ್ಲಿ ಕೂಲಿ ಕೆಲಸಕ್ಕೆ ಸ್ಥಳೀಯರು ಹಾಗೂ ಹೊರ ರಾಜ್ಯದವರು ಬರುತ್ತಾರೆ. ಹೊರರಾಜ್ಯದಿಂದ ಬರುವವರು ಕೂಲಿ ಕೆಲಸಕ್ಕೆ ಕುಟುಂಬ ಸಮೇತ ಬರುತ್ತಾರೆ. ಎಲ್ಲ ಕೂಲಿ ಕಾರ್ಮಿಕರಿಗೂ ನಮ್ಮ ಎಸ್ಟೇಟಿನಲ್ಲಿ ವಸತಿ ವ್ಯವಸ್ಥೆ ಇದೆ. ನಮ್ಮ ಎಸ್ಟೇಟಿನಲ್ಲಿ 30 ಕೂಲಿ ಲೈನ್ ಗಳಿವೆ. ಪ್ರತಿಯೊಂದು ಕೂಲಿ ಲೈನಿನಲ್ಲಿ ಕೂಲಿಗಳು ವಾಸವಿರುತ್ತಾರೆ. ಕೂಲಿ ಕಾರ್ಮಿಕರು ಹಾಗೆ ವಾಸವಿರುವ ಸಮಯದಲ್ಲಿ ಒಬ್ಬರಿಗೊಬ್ಬರು ಕಿತ್ತಾಡುತ್ತಾರೆ. ಕೆಲವೊಮ್ಮೆ ಕಿತ್ತಾಟಗಳನ್ನು ಕೂಲಿ ಲೈನಿನ ಸಿಬ್ಬಂದಿಗಳು ಬಗೆಹರಿಸಿದರು ಕೆಲವೊಂದು ಪ್ರಕರಣಗಳು ಪೋಲೀಸ್ ಠಾಣೆಗೂ ಹೋಗುತ್ತವೆ. ಸುಮಾರು 35 ಜನ ಜಾರ್ಕಂಡಿನ ಕೂಲಿಗಳು ನಮ್ಮ ಎಸ್ಟೇಟಿನಲ್ಲಿ ಇರುತ್ತಾರೆ.

11. ನಮ್ಮ ಎಸ್ಟೇಟಿನಲ್ಲಿ ಯಾರಾದರೂ ಮರಣಹೊಂದಿದರೆ ಎಸ್ಟೇಟಿನ ಮಾಲೀಕರು ಪರಿಹಾರ ನೀಡುತ್ತಾರೆ. ನನಗೆ ಗೊತ್ತಿರುವಂತೆ ನನ್ನ ಗಂಡ ಮರಣಹೊಂದಿದಾಗ ಮಾಲೀಕರು ಪರಿಹಾರ ನೀಡಿದ್ದಾರೆ. ನಮ್ಮ ಎಸ್ಟೇಟಿನಲ್ಲಿ ಯಾವಾಗಲೂ

ಜನಸಂದಣಿ ಇರುತ್ತದೆ. ಘಟನೆ ದಿನ ಕೂಲಿ ಕೆಲಸ ಮಾಡುತ್ತಿದ್ದವರ ಹೆಸರು ನನಗೀಗ ನೆನಪಿಲ್ಲ. ನಮ್ಮ ತೋಟದ ಮಧ್ಯೆ ರಾಷ್ಟ್ರೀಯ ಹೆದ್ದಾರಿ ಹಾದುಹೋಗಿದೆ. ಯಾವಾಗಲೂ ಅಲ್ಲಿ ವಾಹನಗಳು ಓಡಾಡುತ್ತವೆ. ಅಕ್ಕಪಕ್ಕದ ಗ್ರಾಮದವರು ಸದರಿ ಹೆದ್ದಾರಿಯಿಂದ ಓಡಾಡುತ್ತಾರೆ.

12. ನಾನು ಮಗುವನ್ನು ಮಾತನಾಡಿಸುವ ಪ್ರಯತ್ನ ಮಾಡಿರಲಿಲ್ಲ. ನನಗೆ ತಕ್ಷಣ ಚಾಸಾ.8 ರವರಿಗೆ ಕರೆ ಮಾಡಲು ಯಾವುದೇ ತೊಂದರೆ ಇರಲಿಲ್ಲ. ನಮ್ಮ ಎಸ್ಟೇಟಿಗೆ ಹತ್ತಿರವಾಗಿರುವ ಆಸ್ಪತ್ರೆ ಎಂದರೆ ನಿಡುವಾಳೆ ಆಸ್ಪತ್ರೆ ಆಗಿದೆ. ನಿಡುವಾಳೆಯಲ್ಲಿ ಒಂದು ಸರ್ಕಾರಿ ಆಸ್ಪತ್ರೆ ಇದೆ. ನಿಡುವಾಳೆಯಲ್ಲಿ ಖಾಸಗಿ ಆಸ್ಪತ್ರೆ ಕೂಡ ಇದೆ ಎಂದರೆ ನನಗೆ ಗೊತ್ತಿಲ್ಲ.

13. ಮಗುವನ್ನು ಬೈಕಿನಲ್ಲಿ ಚಾಸಾ.2 ಮತ್ತು 3 ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ನಾನು ಆಸ್ಪತ್ರೆಗೆ ಹೋಗಿರಲಿಲ್ಲ. ಮಗು ಮೃತಪಟ್ಟ ವಿಚಾರ ನನಗೆ ಸಂಜೆ 5.30 ಕ್ಕೆ ತಿಳಿಯಿತು. ನಾನು ಸ್ವತಃ ಪೋಲೀಸರಿಗೆಹೇಳಿ ಬರೆಸಿಲ್ಲ ಆದರೆ ನಾನು ಹೇಳಿದಂತೆ ಪೋಲೀಸರು ಬರೆದು ಕೊಂಡಿದ್ದಾರೆ. ನನ್ನ ಹೇಳಿಕೆಯಲ್ಲಿ ಏನೆಲ್ಲ ಬರೆದುಕೊಂಡಿದ್ದಾರೆ ಎಂದು ನನಗೀಗ ನೆನಪಿಲ್ಲ.

14. ಅಂದು 1 ನೇ ಆರೋಪಿ ಕೂಲಿ ಕೆಲಸಕ್ಕೆ ಬಂದಿರಲಿಲ್ಲ. ನಾನು ಪೋಲೀಸ್ ಠಾಣೆಗೆ ಒಮ್ಮೆ ಭೇಟಿ ನೀಡಿದ್ದೇನೆ. ಆಸ್ಪತ್ರೆಯಲ್ಲಿ ಪೋಲೀಸರು ನನ್ನ ಸಹಿ ಪಡೆಯಲಿಲ್ಲ. ನಾನು ಹೇಳುವಂತಹ ಯಾವುದೇ ಘಟನೆ ನಮ್ಮ ಎಸ್ಟೇಟಿನಲ್ಲಿ ನಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೆ ಕನ್ನಡ ಭಾಷ್ಷೆ ಬರುವುದಿಲ್ಲ.

15. 1 ನೇ ಆರೋಪಿ ಮಗುವನ್ನು ಸಾಯಿಸಿದ ಬಗ್ಗೆ ನನಗೆ ಸ್ವತಃ ಮಾಹಿತಿ ಇಲ್ಲ. ನನಗೆ ಪೋಲೀಸರು ನೀಡಿದ ಮಾಹಿತಿ ಮೇರೆಗೆ ನ್ಯಾಯಾಲಯದಲ್ಲಿ ಸಾಕ್ಷಿ ನುಡಿಯುತ್ತಿದ್ದೇನೆ. ನನಗೆ ಸಾಕ್ಷಿ ನುಡಿಯಲು ಪೋಲೀಸರು ಹೇಳಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಪೋಲೀಸ್ ಠಾಣೆಗೆ ನಾನು ಘಟನೆ ನಡೆದ ಮೂರನೆ ದಿನ ಹೋಗಿದ್ದೇನೆ, ದಿನಾಂಕ ನೆನಪಿಲ್ಲ.

16.

17. ದಿಃ 15.08.2023 ರಂದು ಶಿವಕುಮಾರ ಮರಣ ಹೊಂದಿದ್ದಾನೆ, ಅಂದು ನಾನು ಕೂಲಿ ಲೈನಿನಲ್ಲಿ ಕೆಲಸ ಮಾಡುತ್ತಿದ್ದೆ, ನನ್ನ ಜೊತೆ ಇನ್ನು 8 ಜನ ಕೂಲಿ ಲೈನಿನಲ್ಲಿ ಕೆಲಸ ಮಾಡುತ್ತಿದ್ದರು, ನಾನು ಕಳೆದ 16 ವರ್ಷಗಳಿಂದ ಕೂಲಿ ಕೆಲಸ ಮಾಡುತ್ತಿದ್ದೇನೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

18. ಅಂದು ಮದ್ಯಾಹ್ಣ 1.30 ಕ್ಕೆ ನಾವು ಊಟ ಮಾಡಿ ಬರುತ್ತಿದ್ದಾಗ 2 ನೇ ಆರೋಪಿ ತನ್ನ ಮಗು ಕಾಣುವುದಿಲ್ಲ ಎಂದು ಹೇಳುತ್ತಿದ್ದಳು, 1 ಮತ್ತು 2 ನೇ ಆರೋಪಿತರು ಸೇರಿ ಮಗುವನ್ನು ಹುಡುಕುತ್ತಿದ್ದರು, ಸ್ವಲ್ಪ ಸಮಯದಲ್ಲಿ ಆರೋಪಿತರು ಬಂಗಲೆಯ ಹತ್ತಿರದಿಂದ ಮಗುವನ್ನು ಕರೆದುಕೊಂಡು ಬಂದರು, ಮಗು ಗಾಬರಿಯಾಗಿದ್ದು ಬಾಯಿಯಲ್ಲಿ ರಕ್ತ ಒಣಗಿತ್ತು, ಬಟ್ಟೆ ಗಲೀಜು ಆಗಿದ್ದು ಮಲ ವಿಸರ್ಜನೆ ಮಾಡಿಕೊಂಡಿತ್ತು, ಮಗುವನ್ನು ಸ್ವಚ್ಚ ಗೊಳಿಸಿ ಬೇರೆ ಬಟ್ಟೆ ಹಾಕಿ ಆಸ್ಪತ್ರೆಗೆ ಕರೆದುಕೊಂಡು ಹೋಗುವಂತೆ ನಾನು ಸೂಚಿಸಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

19. ನಂತರ 1 ನೇ ಆರೋಪಿ ಮಗುವನ್ನು ಹೆಗಲ ಮೇಲೆ ಹಾಕಿಕೊಂಡು ನಡೆದುಕೊಂಡು ಆಸ್ಪತ್ರೆಗೆ ಹೋದರು, ಸ್ವಲ್ಪ ದೂರ ನಡೆದುಕೊಂಡು ಹೋದ ಆರೋಪಿ ಮಗುವಿಗೆ ಪ್ರಜ್ಞೆ ತಪ್ಪಿದೆ ಎಂದು ಜಾರ್ಕಂಡ ನ ಬೇರೆ ಕೂಲಿ ಕೆಲಸದವರಿಗೆ ಪೋನು ಮಾಡಿದ್ದಾನೆ, ಮಗುವನ್ನು ವಾಪಸ್ಸು ಕೂಲಿ ಲೈನಿನ ಬಳಿ ಕರೆದುಕೊಂಡು ಬಂದಿದ್ದಾನೆ, ನಾನು ಆಗ ಕೆಲಸ ಮುಗಿಸಿ ಬರುತ್ತಿದ್ದೆ, ಮಗುವಿನ ಕುತ್ತಿಗೆ ಅಡ್ಡವಾಗಿದ್ದು ನಾನು ಚಾಸಾ.8 ರವರಿಗೆ ಕರೆ ಮಾಡಿ ಮಗುವಿನ ಸ್ಥಿತಿ ವಿವರಿಸಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

20. ನಂತರ ಚಾಸಾ.2 ಹಾಗೂ 3 ರವರು ಮಗುವನ್ನು ಒಂದು ಬೈಕಿನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋದರು, ಮಗುವನ್ನು ಮೊದಲು ನಿಡುವಾಳೆ ಪ್ರಾಥಮಿಕ ಕೇಂದ್ರಕ್ಕೆ ಕರೆದುಕೊಂಡು ಹೋದರು ನಂತರ ಅಲ್ಲಿಂದ ಮಗುವನ್ನು ಮೂಡಿಗೆರೆ ಆಸ್ಪತ್ರೆಗೆ ಕರೆದುಕೊಂಡು ಹೋದರು, ಮಗು ಮರಣಹೊಂದಿತ್ತು, ಮಗುವನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ನಾವು ಕೂಡ ಜೇಪಿನಲ್ಲಿ ಆಸ್ಪತ್ರೆಗೆ ಹೋಗಿದ್ದೆವು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

21. ಮರುದಿನ ಪುನಃ ನಾನು ಮೂಡಿಗೆರೆ ಆಸ್ಪತ್ರೆಗೆ ಹೋದೆ, ಪೋಲೀಸರು ನನಗೆ ಆಸ್ಪತ್ರೆಗೆ ಬರಲು ತಿಳಿಸಿದ್ದರು, ಶವಗಾರದಲ್ಲಿ ಮಗುವಿನ ಶವ ಇತ್ತು, ಮಗುವಿನ ಶವದ ಕುತ್ತಿಗೆಯ ಹತ್ತಿರ ಅಮುಕಿದ ಗುರುತು ಇತ್ತು, ಪೋಲೀಸರು ನನ್ನನ್ನು ವಿಚಾರಿಸಿದಾಗ ನಾನು ಈ ಬಗ್ಗೆ ಹೇಳಿಕೆ ನೀಡಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

22. ಮೂರನೇ ದಿನ ನಾನು ಬಾಳೂರು ಪೋಲೀಸ್ ಠಾಣೆಗೆ ಹೋಗಿದ್ದೆ, ಪೋಲೀಸರು ಆಗ ನನ್ನನ್ನು ವಿಚಾರಿಸಿದರು, ನಾನು ಪೋಲೀಸರಲ್ಲಿ ಈ ಹಿಂದೆ ಹೇಳಿದಂತೆ ನನ್ನ ಹೇಳಿಕೆ ನೀಡಿದ್ದೇನೆ, 2 ನೇ ಆರೋಪಿ ನಮ್ಮ ಕೂಲಿ ಲೈನಿನಲ್ಲಿ ಜಾರ್ಕಂಡ ನಿಂದ ಬಂದ ಕೂಲಿಗಳ ಮಕ್ಕಳನ್ನು ನೋಡಿಕೊಂಡಿದ್ದರು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

23. ಮಗು ಮರಣಹೊಂದಿದ ನಂತರ ನಮಗೆ 1 ನೇ ಆರೋಪಿ ಎರಡನೇ ಆರೋಪಿಯ ಎರಡನೇ ಗಂಡ ಎಂದು ತಿಳಿಯಿತು, ಮೃತ ಮಗು 2 ನೇ ಆರೋಪಿಯ ಮೊದಲ ಗಂಡನಿಂದ ಜನಿಸಿದ್ದು ಎಂದು ಗೊತ್ತಾಯಿತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

24. ಮೃತನಿಗೆ ಪರಿಹಾರ ಸಿಗಲಿ ಎಂದು ಮ್ಯಾನೇಜರ್ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ